ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ. 18ನೇ ಕ್ರಾಸ್ ,ಮಲ್ಲೇಶ್ವರಂ.

ಬೆಂಗಳೂರು-12

ಸಂಖ್ಯೆ:ಪಪೂಶಿಇ/ಶೈಶಾ-04/ಸಭೆ ಸ 01/2012-13 ದಿನಾಂಕ:07-09-2016.

## ಜ್ಞಾಪನ

ವಿಷಯ: 2016-17ನೇ ಸಾಲಿನಲ್ಲಿ NSQF ಯೋಜನೆಯನ್ನು 9 ರಿಂದ 11ನೇ ತರಗತಿಯ ವಿದ್ಯಾರ್ಥಿಗಳಿಗೆ ಮುಂದುವರಿಸುತ್ತಿರುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ 59 ಎಂಸಿಡಿ 2016, ಬೆಂಗಳೂರು ದಿನಾಂಕ 16/06/2016.

2)ಈ ಕಛೇರಿ ಸಮ ಸಂಖ್ಯೆ:ಪಪೂಶಿ/ಶೈಶಾ-04/NVEQF-01/2016-17 ದಿನಾಂಕ 03/08/2016.

3) ರಾ.ಯೋ ನಿರ್ದೇಶಕರ ಜ್ಞಾಸಂ:ಆ5.ಎನ್.ಎಸ್.ಕ್ಯೂ ಎಫ್ 31/2016-17 ದಿನಾಂಕ 19/08/2016.

*****

ಉಲ್ಲೇಖ(01)ರ ಸರ್ಕಾರಿ ಆದೇಶದಂತೆ NSQF ಯೋಜನೆಯಡಿ ಮಾಹಿತಿ ತಂತ್ರಜ್ಞಾನ, ಆಟೋಮೊಬೈಲ್, ಹೆಲ್ತ್‌ಕೇರ್,ರೀಟೆಲ್ ಹಾಗೂ ಬ್ಯೂಟಿ ಮತ್ತು ವೆಲ್‌ನೆಸ್ ಎಂಬ 05 ವೃತ್ತಿ ಶಿಕ್ಷಣ ವಿಷಯಗಳಲ್ಲಿ ಒಂದು ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆಮಾಡಿಕೊಂಡು ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಯ ವಿದ್ಯಾರ್ಥಿಗಳಿಗೆ ಎರಡು ಭಾಷಾ ವಿಷಯಗಳಲ್ಲಿ ಒಂದರಲ್ಲಿ ವಿನಾಯ್ತಿ ನೀಡಿ ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆಗಳನ್ನು ಮಾಡಿ ಕ್ರಮವಹಿಸಲು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇವರಿಗೆ ಅನುಮತಿಸಿ ಆದೇಶಿಸಲಾಗಿದೆ.

ಉಲ್ಲೇಖ(3)ರಂತೆ ಪ್ರಸಕ್ತ ಸಾಲಿನಲ್ಲಿ ಪ್ರಥಮ ಪಿಯು ತರಗತಿಗಳಿಗೆ ವೃತ್ತಿ ಶಿಕ್ಷಣ ವಿಷಯಗಳನ್ನು ಪ್ರಾರಂಭಿಸಿದ್ದು, ಆಯ್ಕೆಯಾದ 100 ಕಾಲೇಜುಗಳಲ್ಲಿ ಪಟ್ಟಿಯೊಂದಿಗೆ ಉಲ್ಲೇಖ(2)ರ ಸುತ್ತೋಲೆಯನ್ನು ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಕ್ರಮವಹಿಸಲು ನೀಡಲಾಗಿದೆ. ಅದೇ ರೀತಿ 9ನೇ ತರಗತಿಯಿಂದ 11ನೇ (ಪ್ರಥಮ ಪಿಯುಸಿ)ತರಗತಿಯವರೆಗೆ ಒಂದು ಸೆಕ್ಟಾರ್‌ಗೆ ಒಬ್ಬರೇ ತರಬೇತುದಾರರು ಕಾರ್ಯ ನಿರ್ವಹಿಸುವರು. ಈ ಸಂಬಂಧ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು ಹಾಗೂ ವೃತ್ತಿ ಶಿಕ್ಷಣದ ವಿಷಯಗಳಿಗೆ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳು ಸದರಿ ಯೋಜನೆಯನ್ನು ಅನುಷ್ಠಾನ ಮಾಡುವ ಬಗ್ಗೆ ಹಾಗೂ ತರಬೇತುದಾರರು ತರಗತಿಗಳನ್ನು ನಡೆಸಲು ಅನುಕೂಲ ಮಾಡಿಕೊಡಲು ಸೂಕ್ತ ಕ್ರಮ ವಹಿಸಲು ಸೂಚಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಅಗತ್ಯ ಕ್ರಮಕ್ಕಾಗಿ.
2. NSQF ಯೋಜನೆಯನ್ನು ಅನುಷ್ಠಾನ ಮಾಡುತ್ತಿರುವ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಮೇಲ್ಕಂಡ ಆದೇಶದಂತೆ ಅಗತ್ಯ ಕ್ರಮ ವಹಿಸಲು ತಿಳಿಸಿದೆ.
3. ಶಾಖಾಧಿಕಾರಿಗಳು,ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ. 4. ಕಛೇರಿ ಪ್ರತಿ.